ಗುಣಮುಖನಾಗಬೇಕಾದ ಪರಿಸ್ಥಿತಿ ಎದುರಾಯಿತು.

ವಿದ್ಯಾರ್ಥಿಯಾದಾಗಿನಿಂದಲೂ ಕೆಂಪು ಬಸ್ಸು ಎಂದರೆ ನನಗೆ ಮೋಹ. ಅಂಥ ಬಸ್ಸಿನಲ್ಲಿ ಕೆಲವೊಮ್ಮೆ ಕಿಕ್ಕಿರಿದು ಬೆನ್ನಿಗೆ ಬೆನ್ನು ತಿಕ್ಕಿಕೊಂಡು ನಿಂತಿರುವಾಗ ನಡುವಿನಿಂದ ವಾಯು ಸ್ಫೋಟವಾಗುತ್ತಿತ್ತು. ಬಸ್ಸಿನಿಂದ ಕೆಳಗಿಳಿದು ಓಡಿಬಿಡಲೇ... ಕಿಟಕಿಯಿಂದ ಹಾರಿಬಿಡಲೇ... ಅನ್ನುವಂಥ ಯೋಚನೆಗಳು ಸುಳಿದರೂ ಇಮೇಜಿಗೆ ಜೋತುಬಿದ್ದು ನಿಂತಲ್ಲೇ ಸ್ತಬ್ಧನಾಗುತ್ತಿದ್ದೆ. ಕೆಲವರು ಅತ್ಯಂತ ಕಟುವಾಗಿ, 'ಯಾವನಪ್ಪಾ ಅವ್ನೂ... ಸ್ವಲ್ಪಾನೂ ನಾಚಿಕೆ ಆಗಲ್ಲವೇನ್ರೀ... ಬೇರೆ ಯಾವ ಜಾಗವೂ ಸಿಗುವುದಿಲ್ಲವಾ ನಿಮಗೆ? ಮಕ್ಕಳು ಮರಿ ಹೆಂಗಸ್ರುಗಳು ಇರ್ತವೆ ಬಸ್ಸಿನೊಳಗೆ ಅನ್ನುವ ಯೋಚನೆ ಮಾಡೋದು ಬೇಡವಾ?' ಅಂತ ಸಾಮಾಜಿಕ ಕಾಳಜಿಯ ಮಾತುಗಳನ್ನಾಡಿ ಬಾಯಿಚಟ ತೀರಿಸಿಕೊಳ್ಳುತ್ತಿದ್ದರು. ಮೊದಲು ಯಾವುದಾದರೂ ಆಸ್ಪತ್ರೆಗೆ ಹೋಗಿ ಹೊಟ್ಟೆ ತೋರಿಸಿಕೊಂಡು ಸ್ವಚ್ಛ ಮಾಡಿಕೊಳ್ರೀ... ಇಲ್ಲಾಂದ್ರೆ ಯಾವುದಾದರೂ ಗಂಡಾಂತರದ ರೋಗ ಅಮರಿಕೊಳ್ಳುತ್ತೆ ಅಷ್ಟೇ...' ಅಂತ ಸಲಹೆ ಕೊಡುತ್ತಿದ್ದವರೂ ಇದ್ದರು.

ಪಿಯುಸಿಯ ದಿನಗಳಲ್ಲಿಯೂ ಆಗಾಗ್ಗೆ ನಮ್ಮೂರಿನ ಟಾಕೀಸಿನೊಳಗೆ ತೂರಿ ಗಾಂಧಿ ಕ್ಲಾಸಿನಲ್ಲಿ ನೆಮ್ಮದಿಯಾಗಿ ಒರಗಿ ಕುಳಿತು ಸಿನಿಮಾ ನೋಡುವಾಗ ಥಟ್ಟನೆ ಕೆಲವರು ಕ್ಲೈಮಾಕ್ಸ್ ಕಣ್ಣು ಮುಂದೆ ಬರುವಂತೆ ಮಾಡಿಬಿಡುತ್ತಿದ್ದರು. ಇಂಟರ್ವೆಲ್‌ನಲ್ಲಿ ತಿಂದಿದ್ದ ಚಿಪ್ಸು, ತಂಪು ಪಾನೀಯಗಳು ಹೊಟ್ಟೆಯಲ್ಲೇ ಒಮ್ಮೆ ಗಿರಕಿ ಹೊಡೆದು ಹೊರಬರಲು ಹವಣಿಸುತ್ತಿದ್ದವು. ತೆರೆಯ ಮೇಲಿನ ಚಿತ್ರಕಥೆಯೇ ಮರೆತು ಹೋಗಿ ಸುತ್ತಲಿನ ಯಾವ ದಿಕ್ಕಿನಿಂದ ಮುಂದಿನ ದಾಳಿ ಎರಗಬಹುದೆನ್ನುವ ಆತಂಕದಲ್ಲಿ ಆಂಬುಶ್ಯು ಹಾಕಿ ಕುಳಿತ ಕಮಾಂಡೋಗಳಂತೆ ಸನ್ನದ್ಧರಾಗಿ ಪಿಚ್ಚರು ಮುಗಿಯುವವರೆಗೂ ಕುಳಿತಿದ್ದು ಹೊರಬರುತ್ತಿದ್ದೆವು. ಹೀಗೆ ಎಲ್ಲೆಲ್ಲೋ ಕೆಲವು ಅನಾಮಿಕ ಬಂಧುಗಳು ಆಗಾಗ ಧುತ್ತನೆ ಎದುರುಗೊಂಡು ತಮ್ಮ ಅನಿರೀಕ್ಷಿತ ಕರಾಮತ್ತು ತೋರಿ ನಮ್ಮನ್ನು ಕಸಿವಿಸಿಗೊಳಿಸುತ್ತಿದ್ದುದು ನಡೆದೇ ಇರುತ್ತಿತ್ತು.

ಈ ನಡುವೆ ಕೆಲವು ನಿಷ್ಠುರಿಗಳಿದ್ದರು. ಬಸ್ಸಿನಲ್ಲೋ, ಟ್ರೇನಿನಲ್ಲೋ ಕುಳಿತಾಗ ಮೆತ್ತಗೆ ಒತ್ತರಿಸಿ ಪಕ್ಕದಲ್ಲಿ ಕೂರುತ್ತಿದ್ದರು. 'ನೋಡಪ್ಪಾ ನಾವು ವಯಸ್ಸಾದೋರು... ಕಾಯಿಲೆ ಮನುಷ್ಯರು... ಆಗಾಗ ಹೊಟ್ಟೆ ಹಿಡಕೊಳ್ಳುತ್ತೆ. ಪಕ್ಕ ಕುಂತಿದೀನಿ ಅಂತ ಬೇಜಾರು ಮಾಡ್ಕಬೇಡ... ಬೈದುಕೋಬೇಡ...' ಅನ್ನುತ್ತಲೇ 'ವಿತ್ ಪರ್ಮಿಷನ್' ಹತಾರು ತೆಗೆಯುತ್ತಿದ್ದರು. ವೀಕ್‌ನೆಸ್ಸು ಒಪ್ಪಿಕೊಂಡಾಗಿದೆ. ಅಡ್ವಾನ್ಸು ವಾರ್ನಿಂಗು ಕೊಟ್ಟೂ ಆಗಿದೆ. ಹೀಗೆ ಒಪ್ಪಿಗೆ ಪಡೆದೇ ನರಕ ತೋರಿಸುವ ಪುಣ್ಯಾತ್ಮರಿಗೆ ಇನ್ನೇನು ಹೇಳಲು ಸಾಧ್ಯ?...

ಈ ತರಹದ ಹವಾಮಾನ ವಿರೋಧಿಗಳ ಕೃತ್ಯಗಳೇನೇ ಇರಲಿ, ಕೆಲ ವೈಜ್ಞಾನಿಕ ಅಂಶಗಳನ್ನೂ ಇಲ್ಲಿ ನೋಡಬೇಕು. ಈ ತ್ಯಾಜ್ಯ ವಾಯುವನ್ನು ಪರಿಸರಕ್ಕೆ ಸೇರ್ಪಡೆ ಮಾಡುವ ಈ ನಿತ್ಯ ನಿರಂತರ ಕಾಯಕದಲ್ಲಿ ಗಂಡಸರದೇ ಕೊಡುಗೆ ಜಾಸ್ತಿ ಎಂದು ಸಮೀಕ್ಷೆ ಹೇಳುತ್ತದೆ. ಹೆಚ್ಚಾಗಿ ಮನುಷ್ಯ ನಿದ್ದೆಯಲ್ಲಿದ್ದಾಗಲೇ ಚುರುಕುಗೊಳ್ಳುವ ಈ ಪ್ರಕ್ರಿಯೆ ರಾತ್ರೋರಾತ್ರಿ ನಿರ್ಭಿಡೆಯಿಂದ ನಿಸ್ಸಂಕೋಚದಿಂದ ಹೊರಬೀಳುತ್ತದಂತೆ. ಅದೂ ಸೆಕೆಂಡಿಗೆ 10 ಅಡಿ ವೇಗದಲ್ಲಿ... ಅಂದರೆ, ಅಂದಾಜಿಸಿ. ಆರೋಗ್ಯವಂತನೊಬ್ಬ ಇಷ್ಟವಿರಲಿ, ಇಲ್ಲದಿರಲಿ ದಿನಕ್ಕೆ ಕನಿಷ್ಠ 14 ಬಾರಿಯಾದರೂ ತನ್ನೊಳಗಿನ ಈ ವಾಯುತಿತ್ತಿಯನ್ನು ಹಂತಹಂತವಾಗಿ ಪಸರಿಸದಿದ್ದಲ್ಲಿ ದೇಹವು ರೋಗಗಳ ಗೂಡಾಗಿ ಆತ ವೈದ್ಯರನ್ನು ಕಾಣಬೇಕಾದ ಅಪಾಯ ಉಂಟಾಗಬಹುದೆಂದು 'ಹವಾ'ಮಾನ ತಜ್ಞರು ಎಚ್ಚರಿಸಿರುವುದೂ ಸುದ್ದಿಯಾಗಿದೆ. ಈ ಅಪಾನವಾಯು ಸೇವನೆಯು ಒಂದು ರೀತಿಯಲ್ಲಿ ನಿಮ್ಮ ದೇಹಕ್ಕೆ ಒಳಿತೇ ಹೊರತು ಅಂಥಾ ಗಂಭೀರ ಕಂಟಕವೇನೂ ಇಲ್ಲವೆಂಬ ವಿಚಾರಗಳು ಇತ್ತೀಚಿನ ಸಂಶೋಧನೆಗಳಿಂದ ಬೆಳಕಿಗೆ ಬಂದು 'ವಾಯುಪುತ್ರ'ರ ಉತ್ಸಾಹವನ್ನು ಇಮ್ಮಡಿಗೊಳಿಸಿದೆ. ಸನ್ನಿವೇಶವನ್ನು ಎದುರುಗೊಳ್ಳುವ ಒಡಪಾಯಿಗಳು ತಮ್ಮ ಶಕ್ತ್ಯಾನುಸಾರ ಸ್ವಯಂ ರಕ್ಷಣಾ ಕ್ರಮಗಳನ್ನು ಕೈಗೊಂಡು ಈ ಎಪಿಸೋಡನ್ನು ಸುಖಾಂತ್ಯಗೊಳಿಸಲು ಸಹಕರಿಸಬೇಕೆನ್ನುವಲ್ಲಿಗೆ...

●